# ವಿದ್ವಾಂಸರ ಸಂಗವೇ ಸೌಭಾಗ್ಯ




ತಂದೆ ಹಾಗೂ ಗುರು ವಿದ್ವಾನ್ ಮೈಸೂರು ನಾಗರಾಜ್ ಜೊತೆಗೆ ಕಾರ್ತಿಕ್ ಪಿಟೀಲು ವಾದನ

- **ಸೋಲೊ, ಜುಗಲ್‌ಬಂದಿ, ತ್ರಿಗಲ್‌ಬಂದಿ ಎಲ್ಲದರಲ್ಲೂ ನಿಮಗೆ ಪಿಟೀಲು ವಾದನ ಸಲೀಸು. ನಿಮಗೆ ಒದಗಿದ ಅವಕಾಶಗಳ ಬಗ್ಗೆ ಹೇಳಿ.**

ತಾತ ಮಹದೇವಪ್ಪ ಹಾಗೂ ತಂದೆ ಮೈಸೂರು ನಾಗರಾಜ್ ಅವರ ಬಳಿ ಒಂಬತ್ತನೇ ವಯಸ್ಸಿಗೇ ಪಿಟೀಲು ನುಡಿಸಲಾರಂಭಿಸಿದೆ. ಪಿಟೀಲು ಸೋಲೊ ಕಛೇರಿ, ಪಿಟೀಲು ಜುಗಲ್‌ಬಂದಿ, ತ್ರಿಗಲ್‌ಬಂದಿ, ಪಿಟೀಲು– ಕೊಳಲು, ಪಿಟೀಲು– ಸಿತಾರ್ ಜುಗಲ್‌ಬಂದಿ, ಹಿಂದೂಸ್ತಾನಿ ಸಂಗೀತಗಾರರ ಜತೆಗೆ ಸಾಥಿ, ಜಾಸ್ ಸಂಗೀತ, ಫ್ಯೂಷನ್ ಸಂಗೀತ.... ಹೀಗೆ ಸಂಗೀತದ ಎಲ್ಲ ಪ್ರಕಾರಗಳಲ್ಲೂ ನುಡಿಸಲು ಅವಕಾಶ ಸಿಕ್ಕಿದೆ.

ಹಿರಿಯ ಕೊಳಲು ವಿದ್ವಾಂಸ ಎನ್.ರಮಣಿ ಅವರ ಜೊತೆ ಪಿಟೀಲು, ಕರ್ನಾಟಕ ಸಂಗೀತದ ಹಿರಿಯ ಗಾಯಕ ಟಿ.ವಿ. ಶಂಕರನಾರಾಯಣ್ ಅವರ ಗಾನಕಛೇರಿಗೆ ಪಿಟೀಲು ಪಕ್ಕವಾದ್ಯ (ಕಳೆದ ವರ್ಷ ಬೆಂಗಳೂರಿನ ರಾಮಸೇವಾ ಮಂಡಳಿಯಲ್ಲಿ ನಡೆದ ರಾಮನವಮಿ ಉತ್ಸವದಲ್ಲಿ) ನುಡಿಸಿದಾಗ ಅವರು ಬೆನ್ನುತಟ್ಟಿ ಹೇಳಿದ್ದು 'ಹುಲಿ ಹೊಟ್ಟೆಯಲ್ಲಿ ಹುಲಿನೇ ಹುಟ್ಟೋದು' ಎಂದು ಹೇಳಿದಾಗ ಕಣ್ತುಂಬಿ ಬಂತು. ಇಷ್ಟು ದೊಡ್ಡ ವಿದ್ವಾಂಸರ ಜೊತೆಗೆ ಕುಳಿತುಕೊಳ್ಳುವುದೇ ಒಂದು ಸೌಭಾಗ್ಯ.

- **ಹಲವು ಘನ ವಿದ್ವಾಂಸರ ಜೊತೆಗೆ ನುಡಿಸುವ ಸದವಕಾಶಗಳು ನಿಮಗೆ ಒದಗಿ ಬಂದಿವೆ. ಸಹಜವಾಗಿಯೇ ಥ್ರಿಲ್ ಆಗಿರುತ್ತದೆ. ನಿಮ್ಮ ಪ್ರತಿಕ್ರಿಯೆ ಏನು?**

ಮೊನ್ನೆ ಮೊನ್ನೆ ನಡೆದ ಬೆಂಗಳೂರು ಗಣೇಶೋತ್ಸವದಲ್ಲಿ ಗಾಯಕ ವಿಜಯಪ್ರಕಾಶ್ ಹಾಗೂ ಉಸ್ತಾದ್ ರಷೀದ್ ಖಾನ್ ಅವರ ಕರ್ನಾಟಕ– ಹಿಂದೂಸ್ತಾನಿ ಜುಗಲ್‌ಬಂದಿ ಗಾಯನಕ್ಕೆ ಪಿಟೀಲು ಪಕ್ಕವಾದ್ಯ ನುಡಿಸಿದ್ದೆ. ವಿಜಯಪ್ರಕಾಶ್ ಅವರು 'ನಳಿನಕಾಂತಿ' ರಾಗ ಹಾಡಿದರು. ಆಲಾಪ, ಕೃತಿ, ಸ್ವರಪ್ರಸ್ತಾರ ಎಲ್ಲವೂ ಮನಮೋಹಕವಾಗಿತ್ತು. ರಷೀದ್‌ಖಾನ್ ಅವರ ಗಾಯನದಲ್ಲಿ ತಾನ್‌ಗಳ ಸುರಿಮಳೆ ವಿಶಿಷ್ಟ ಅನುಭೂತಿ ಮೂಡಿಸಿತ್ತು. ಈ ಗಾಯಕದ್ವಯರಿಗೆ ವಯೊಲಿನ್ ಸಾಥಿ ಕೊಟ್ಟು ಅವರಿಂದ ಪ್ರಶಂಸೆ ಪಡೆದಾಗ ಅಕ್ಷರಶಃ ಕಣ್ಣಲ್ಲಿ ನೀರು ಬಂತು. ಇದೊಂದು ನನ್ನ ಜೀವನದಲ್ಲಿ ಸ್ಮರಣೀಯ ದಿನ ಹಾಗೂ ಇದೊಂದು ನನ್ನ ಸೌಭಾಗ್ಯ ಎಂದೇ ಭಾವಿಸುತ್ತೇನೆ.



ಹೆಸರಾಂತ ಗಾಯಕರಾದ ಉಸ್ತಾದ್ ರಷೀದ್‌ಖಾನ್ ಹಾಗೂ ವಿಜಯಪ್ರಕಾಶ್ ಅವರ ಜುಗಲ್‌ಬಂದಿಗೆ ಕಾರ್ತಿಕ್ ಪಿಟೀಲು ಸಹಕಾರ

- **ಇಷ್ಟು ಚಿಕ್ಕವಯಸ್ಸಿಗೇ ಯೂರೋಪ್, ಅಮೆರಿಕ ರಾಷ್ಟ್ರಗಳಲ್ಲೆಲ್ಲ ಸಂಚರಿಸಿ ಹಲವಾರು ಕಛೇರಿ ನೀಡಿ ಬಂದ ಅನುಭವ ನಿಮಗಿದೆ. ಇದು ಸಾಧ್ಯವಾದದ್ದು ಹೇಗೆ?**

ಘಟಂನಲ್ಲಿ ಖ್ಯಾತಿ ಪಡೆದ ಗಿರಿಧರ ಉಡುಪ ಸೇರಿದಂತೆ ಪಿಟೀಲು, ಖಂಜೀರ, ತವಿಲ್, ಕ್ಲಾರಿಯೊನೆಟ್ ಒಳಗೊಂಡ ವಾದ್ಯ ತಂಡದೊಂದಿಗೆ 'ಸಾಗರ್ ಬ್ಯಾಂಡ್' ಹೆಸರಿನಲ್ಲಿ ಯೂರೋಪಿನಾದ್ಯಂತ ಪ್ರವಾಸ ಮಾಡಿ ಹಲವು ಕಛೇರಿಗಳನ್ನು ನೀಡಿ ಬಂದೆ. ಎಲ್ಲ ಕಡೆಗಳಲ್ಲೂ ದೊಡ್ಡ ದೊಡ್ಡ ಸಭಾಂಗಣದಲ್ಲಿ ಸೇರಿದ್ದ ಸಂಗೀತಪ್ರಿಯರು ಕೊಡುವ ಪ್ರತಿಕ್ರಿಯೆ ನಿಜಕ್ಕೂ ಪುಳಕ ತರುವಂತಿತ್ತು. ಈಚೆಗೆ ಅಮೆರಿಕಕ್ಕೆ ಹೋಗಿ ಎರಡು ವಾರಗಳಲ್ಲಿ ಸಂಗೀತ ಕಛೇರಿಗಳು, ಕಾರ್ಯಾಗಾರಗಳಲ್ಲಿ ಭಾಗವಹಿಸಿ ಬಂದೆ. ಇವೆಲ್ಲವೂ ಬಹಳ ಖುಷಿ ಕೊಡುವಂಥದ್ದು. ಅಮೆರಿಕದಲ್ಲಿ ಇರಾಕ್ ಸಂಗೀತಗಾರನ ಜತೆ ಸೇರಿ ಜಾಸ್ ನುಡಿಸಿದಾಗ 'ಸ್ಟ್ಯಾಂಡಿಂಗ್ ಅವೇಷನ್' ಪಡೆದದ್ದು ಕೂಡ ಮನಸ್ಸಿಗೆ ಖುಷಿಕೊಡ್ತು.

- **ಸಂಗೀತ ಕಲಿಕೆಯ ಜೊತೆಗೆ ಕೇಳ್ಮೆಯಿಂದಲೂ ಬರುತ್ತದೆ. ಸಂಗೀತ ಆಲಿಸುವ ಹವ್ಯಾಸ ನಿಮಗೆಷ್ಟಿದೆ?**

ಎಲ್ಲ ರೀತಿಯ ಸಂಗೀತವನ್ನೂ ಕೇಳ್ತೀನಿ. ವಿದ್ವಾಂಸರಾದ ಎಂ.ಎಸ್. ಗೋಪಾಲಕೃಷ್ಣನ್, ಲಾಲ್ಗುಡಿ ಜಯರಾಮನ್, ಕೆ.ವಿ. ನಾರಾಯಣಸ್ವಾಮಿ, ಡಾ. ಬಾಲಮುರಳಿಕೃಷ್ಣ ಮುಂತಾದವರ ಸಂಗೀತವನ್ನು ನಿತ್ಯವೂ ಕೇಳ್ತೀನಿ. ಕರ್ನಾಟಕ ಸಂಗೀತ ಗಾಯನ, ಎಲ್ಲ ವಾದನಗಳು, ಹಿಂದೂಸ್ತಾನಿ ಸಂಗೀತ, ಜಾಸ್, ಸಿನಿಮಾ ಸಂಗೀತ ಎಲ್ಲವನ್ನೂ ತುಂಬ ಕೇಳ್ತೀನಿ. ಎಲ್ಲ ಕಲಾವಿದರ ಮನೋಧರ್ಮವನ್ನು ಗ್ರಹಿಸಿ ಅರ್ಥ ಮಾಡಿಕೊಳ್ತೀನಿ. ನನ್ನದೇ ಆದ ಹೊಸ ಮನೋಧರ್ಮ ಸಂಗೀತ ಸೃಷ್ಟಿಸುವ ಪ್ರಯತ್ನ ಮಾಡ್ತೀನಿ. ಆದರೆ ಯಾರ ಮನೋಧರ್ಮ (ಕಲ್ಪನಾಸ್ವರ)ವನ್ನೂ ಕಾಪಿ ಮಾಡಲ್ಲ'.

- **ನಿಮ್ಮ ಸಂಗೀತ ಅಭ್ಯಾಸ, ಮನೆಯವರ ಸಹಕಾರದ ಬಗ್ಗೆ ಹೇಳುವುದಾದರೆ?**

.. ಡೆಡಿಕೇಷನ್, ಡಿಟರ್ಮಿನೇಷನ್. ಪ್ರಾಕ್ಟೀಸ್..' ಇವು ಮೂರು ಇದ್ದರೆ ಮಾತ್ರ ಸಂಗೀತದಲ್ಲಿ ಮುಂದೆ ಬರಲು ಸಾಧ್ಯ. ನನಗೆ ತಂದೆಯ ಸಂಪೂರ್ಣ ಸಹಕಾರ, ಪ್ರೋತ್ಸಾಹ ಸದಾ ಇದೆ. ಆದರೆ ಸ್ವಪ್ರಯತ್ನ, ಪರಿಶ್ರಮ, ಸಾಧನೆ, ಸತತ ಅಭ್ಯಾಸ ಇಲ್ಲದೇ ಇದ್ದರೆ ಸಂಗೀತದಲ್ಲಿ ಮುಂದುವರಿಯಲು ಸಾಧ್ಯವೇ ಇಲ್ಲ. ■